

## ಡ್ರೈವಿಂಗ್ ಸ್ಕೂಲ್‌ನಲ್ಲಿ ರೊಬೋಟೀಕರಣ

ಆ ಆಸ್ಪತ್ರೆಯ ವ್ಯವಸ್ಥಾಪಕರಿಗೆ ದೂರದ ಒಂದು ಆಸೆ. ಈಗಾಗಲೇ ಪಿತ್ತಜನಕಾಂಗವನ್ನು ಆಸ್ಪತ್ರೆಗೆ ತುರ್ತಾಗಿ ರವಾನೆ ಮಾಡಿದ ವಿಚಾರ ಎಲ್ಲಾ ಮಾಧ್ಯಮಗಳಲ್ಲಿ ಜಗಜ್ಜಾಹೀರಾಗಿರುವಾಗ ತಮ್ಮ ಬೇಡಿಕೆಯೂ ಅದರ ಬೆನ್ನಲ್ಲೇ ನೆರವೇರಲಿ ಎನ್ನುವ ನಿರೀಕ್ಷೆ. ಆದರೆ ಹನ್ಸಾಳ ದೃಢವಾಣಿಗೆ ಅವರಲ್ಲಿ ಎದುರು ಉತ್ತರ ಕೊಡುವ ಛಾತಿ ಇರಲಿಲ್ಲ. ರೋಗಿಯನ್ನು ಒಂದು ಗಂಟೆಯ ಕಾಲ ನಿಭಾಯಿಸಬಹುದಾಗಿತ್ತಾದ್ದರಿಂದ ಅವರ ಬೇಡಿಕೆ ಪ್ರಾರಂಭದಲ್ಲೇ ನೀರ್ಗುಳ್ಳೆಯಂತೆ ಒಡೆದುಹೋಗಿತ್ತು.